


## ವಲಯವಾರು ಕಸಿ ಕೇಂದ್ರಗಳು

(2026ರ ವೇಳೆಗೆ)

2026ರ ವೇಳೆಗೆ ಒಟ್ಟು 86 ಆಸ್ಪತ್ರೆಗಳು (ಇದರಲ್ಲಿ 5 ಸರ್ಕಾರಿ ಆಸ್ಪತ್ರೆಗಳು ಸೇರಿವೆ) ಅಂಗಾಂಗ ಕಸಿಗೆ ಅನುಮೋದನೆ ಪಡೆದಿವೆ. ರಾಜ್ಯದಾದ್ಯಂತ 30 ಅಂಗಾಂಗ ದಾನ ಸಂಗ್ರಹ ಕೇಂದ್ರ(ಎನ್‌ಟಿಒಆರ್‌ಸಿ)ಗಳು ಕಾರ್ಯನಿರ್ವಹಿಸುತ್ತಿವೆ.

ವಲಯ; ಆಸ್ಪತ್ರೆಗಳ ಸಂಖ್ಯೆ




ಕಾರಿಡಾರ್ ಮೂಲಕ ಶೂನ್ಯ ಸಂಚಾರ ದಟ್ಟಣೆಯ ಹಾದಿಯನ್ನು ಸೃಷ್ಟಿಸಿ ಶೀಘ್ರ ತಲುಪಿಸುವ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಆ ಮೂಲಕ ಅಂಗಾಂಗ ಕಸಿ ನಿರೀಕ್ಷೆಯಲ್ಲಿರುವ ವ್ಯಕ್ತಿಗೆ ಜೀವಚೈತನ್ಯ ನೀಡಲು ಸುವ್ಯವಸ್ಥೆಯನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ. ಈ ಪ್ರಕ್ರಿಯೆಯ ಎಲ್ಲಾ ಮಾಹಿತಿಯನ್ನು ರಾಜ್ಯ ಅಂಗಾಂಗ ಮತ್ತು ಅಂಗಾಂಶ ಕಸಿ ಸಂಸ್ಥೆ(ಎಸ್‌ಒಟಿಟಿಒ) ಜೀವಸಾರ್ಥಕತೆ ನಿರ್ವಹಿಸುತ್ತದೆ.

### ಏನಿದು ಜೀವಸಾರ್ಥಕತೆ / SOTTO ಕರ್ನಾಟಕ?

ರಾಜ್ಯದಲ್ಲಿ ಅಂಗಾಂಗ ದಾನಗಳನ್ನು ಉತ್ತೇಜಿಸುವುದು, ಅಂಗಾಂಗ ನಿರೀಕ್ಷೆಯಲ್ಲಿರುವ ವ್ಯಕ್ತಿಗಳೊಂದಿಗೆ ಸಮನ್ವಯ, ಅಂಗಾಂಗ ದಾನಿಗಳ ನಡುವೆ ಸಂಪರ್ಕ ಸೇತುವಾಗಿ ಕಾರ್ಯನಿರ್ವಹಿಸಲೆಂದೇ ಗುರುತಿಸಿಕೊಂಡಿರುವ 'ಜೀವಸಾರ್ಥಕತೆ' ಸಂಸ್ಥೆ 2017ರಲ್ಲಿ ನೋಂದಾಯಿತ ಸಂಸ್ಥೆಯಾಗಿದೆ. ಕರ್ನಾಟಕ ಕಸಿ ಪ್ರಾಧಿಕಾರವೆಂದು ಕರೆಸಿಕೊಳ್ಳುವ ಈ ಸಂಸ್ಥೆ ಮಿದುಳು ನಿಷ್ಕ್ರಿಯಗೊಂಡ ದಾನಿಗಳಿಂದ ಅಂಗಾಂಗಗಳ ಸಂಗ್ರಹಣೆ ಸೇರಿದಂತೆ ದಾನಿಗಳ ಮಾಹಿತಿಗಳನ್ನು ನಿರ್ವಹಿಸುತ್ತದೆ.

ಇದೇ ಸಂಸ್ಥೆ 2020ರಲ್ಲಿ ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ (ಎಸ್‌ಒಟಿಟಿಒ: ಸ್ಟೇಟ್ ಆರ್ಗನ್ ಟಿಶ್ಯೂ ಮತ್ತು ಟ್ರಾನ್ಸ್‌ಪ್ಲಾಂಟ್ ಆರ್ಗನೈಸೇಶನ್) ಎಂದು ಗುರುತಿಸಿಕೊಂಡಿದೆ. ಈ ಸಂಸ್ಥೆ ರಾಜ್ಯಾದ್ಯಂತ ಆನ್‌ಲೈನ್ ಮೂಲಕ ಅಂಗದಾನಕ್ಕೆ ಪ್ರತಿಜ್ಞಾವಿಧಿ ಸ್ವೀಕರಿಸಿ, ನೋಂದಣಿ ಮಾಡಿಕೊಂಡ ವ್ಯಕ್ತಿಗಳ ಮಾಹಿತಿಯನ್ನು ನಿರ್ವಹಿಸುತ್ತದೆ. ಜೊತೆಗೆ, ಅಂಗಾಂಗ ದಾನಿಗಳ ನಿರೀಕ್ಷೆಯಲ್ಲಿರುವ ರೋಗಿಗಳ ಮಾಹಿತಿಯನ್ನು ಸಹ ನಿರ್ವಹಿಸುತ್ತದೆ. 2026ರ ಫೆಬ್ರುವರಿ



> ರಾಜ್ಯದ ಎಲ್ಲಾ ತಾಲೂಕು ಆಸ್ಪತ್ರೆ, ಜಿಲ್ಲಾಸ್ಪತ್ರೆ ಸೇರಿದಂತೆ ವೈದ್ಯಕೀಯ ಕಾಲೇಜುಗಳ ಸಿಬ್ಬಂದಿಗೂ ಅಂಗಾಂಗ ದಾನ, ಕಸಿಗೆ ಸಂಬಂಧಿಸಿದ ಜಾಗೃತಿಯನ್ನು ಮೂಡಿಸಲಾಗುತ್ತಿದೆ. ಆ ಮೂಲಕ ಅಂಗದಾನಿಗಳ ನಿರೀಕ್ಷೆಯಲ್ಲಿರುವ ವ್ಯಕ್ತಿಗಳಿಗೆ ಸಕಾಲಕ್ಕೆ ಅಗತ್ಯವುಳ್ಳ ಕಸಿ ವ್ಯವಸ್ಥೆಗೆ ಇಲಾಖೆಯಿಂದ ಸಹಕಾರ ನೀಡಲಾಗುತ್ತಿದೆ.
>
> **-ಹರ್ಷಗುಪ್ತ,** ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

**ಜೀವಸಾರ್ಥಕತೆಗೆ 5 ವಲಯಗಳು**

- ಬೆಂಗಳೂರು • ಮಂಗಳೂರು
- ಹುಬ್ಬಳ್ಳಿ/ಧಾರವಾಡ
- ಕಲಬುರಗಿ • ಮೈಸೂರು

## ಅಂಗಾಂಗಕ್ಕಾಗಿ ಕಾಯುತ್ತಿರುವ ರೋಗಿಗಳು




